**ಅಧ್ಯಾಯ 2**

**ಹಕ್ಕು-ಆಧಾರಿತ ಶೈಕ್ಷಣಿಕ ಪರಿಕಲ್ಪನೆಯ ಚೌಕಟ್ಟು**

**ಪೀಠಿಕೆ**

ಮಾನವ ಹಕ್ಕು-ಆಧಾರಿತ ಶೈಕ್ಷಣಿಕ ವಿಧಾನದ ಅಭಿವೃದ್ಧಿಯು ಶೈಕ್ಷಣಿಕ ಅವಕಾಶದ ಹಕ್ಕು, ಗುಣಮಟ್ಟದ ಶಿಕ್ಷಣದ ಹಕ್ಕು ಮತ್ತು ಶಿಕ್ಷಣದಲ್ಲಿ ಮಾನವ ಹಕ್ಕುಗಳನ್ನು ಗೌರವಿಸುವುದು - ಇವುಗಳನ್ನು ಉದ್ದೇಶಿಸುವ ಚೌಕಟ್ಟಿನ ಅಗತ್ಯವನ್ನು ಹೊಂದಿದೆ. ಈ ಮೂರು ಆಯಾಮಗಳು ಪರಸ್ಪರ ಅವಲಂಬಿತವಾಗಿವೆ ಮತ್ತು ಒಂದರ ಜೊತೆ ಇನ್ನೊಂದು ಮಿಳಿತವಾಗಿವೆ ಮತ್ತು ಹಕ್ಕು-ಆಧಾರಿತ ಶಿಕ್ಷಣವು ಈ ಮೂರರ ಒಟ್ಟು ಸಾಕ್ಷಾತ್ಕಾರವನ್ನು ಬಯಸುತ್ತದೆ.

ಶಿಕ್ಷಣದ ಹಕ್ಕು ಸಮಾಜದ ಅತ್ಯಂತ ಅಂಚಿನಲ್ಲಿರುವ ಮಕ್ಕಳನ್ನು ಒಳಗೊಂಡಂತೆ, ಶಿಕ್ಷಣದ ಸಾರ್ವತ್ರಿಕ ಅವಕಾಶವನ್ನು ಖಾತ್ರಿಪಡಿಸುವ ಬದ್ಧತೆಯನ್ನು ಬಯಸುತ್ತದೆ. ಆದರೆ ಮಕ್ಕಳನ್ನು ಶಾಲೆಗೆ ಸೇರಿಸಿದರಷ್ಟೆ ಸಾಕಾಗುವುದಿಲ್ಲ; ಕೇವಲ ಶಾಲೆಗೆ ಸೇರಿಸುವುದರಿಂದ ಮನುಷ್ಯನಿಗೆ ತನ್ನ ಆರ್ಥಿಕ ಮತ್ತು ಸಾಮಾಜಿಕ ಉದ್ದೇಶಗಳನ್ನು ಸಾಧಿಸಲು ಮತ್ತು ಜವಾಬ್ದಾರಿಯುತ ಮತ್ತು ಸಕ್ರಿಯ ಪೌರತ್ವವನ್ನು ಸಾಧ್ಯಮಾಡಲು ಅಗತ್ಯ ಇರುವ ಕೌಶಲ್ಯ, ಜ್ಞಾನ, ಮೌಲ್ಯಗಳು ಮತ್ತು ವರ್ತನೆಗಳನ್ನು ಬೆಳೆಸಿಕೊಳ್ಳಲು ಅಗತ್ಯವಾದ ಶಿಕ್ಷಣ ದೊರೆಯುತ್ತದೆ ಎಂಬುದಕ್ಕೆ ಏನೂ ಖಾತ್ರಿ ಅಲ್ಲ. Southern and Eastern African Consortium for Monitoring Educational Quality (1995-1998) ಸಂಸ್ಥೆ ನಡೆಸಿದ ಅಧ್ಯಯನವೊಂದು, ತನ್ನ ಅಧ್ಯಯನದ ಹಲವು ಅಂಶಗಳ ಜೊತೆಗೆ, ರಾಷ್ಟ್ರೀಯ ಓದುವ ತಜ್ಞರು(national reading experts) ಮತ್ತು ಆರನೇ ತರಗತಿಯ ಶಿಕ್ಷಕರು ಸ್ಥಾಪಿಸಿದ ಮಾನದಂಡಗಳ ಆಧಾರದ ಮೇಲೆ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಓದುವ ಸಾಮರ್ಥ್ಯವನ್ನು ಅಳೆಯುತ್ತದೆ. ಈ ಅಧ್ಯಯನ ಕೈಗೊಂಡ ಏಳು ದೇಶಗಳ ಪೈಕಿ ನಾಲ್ಕು ದೇಶಗಳಲ್ಲಿ, ಆರನೇ ತರಗತಿಯ ಅರ್ಧಕ್ಕಿಂತ ಕಡಮೆ ವಿದ್ಯಾರ್ಥಿಗಳು ಓದುವಿಕೆಯ ಕನಿಷ್ಠ ಸಾಮರ್ಥ್ಯವನ್ನು ಸಾಧಿಸಲು ಸಮರ್ಥರಾಗಿರುವುದು ಗಮನಕ್ಕೆ ಬರುತ್ತದೆ.[21] Programme d'Analyse des Systèmes Éducatifs de la CONFEMEN (PASEC) ಸಂಸ್ಥೆಯು 1996-2001ರಲ್ಲಿ ಫ್ರೆಂಚ್ ಮಾತನಾಡುವ ಆರು ಆಫ್ರಿಕಾದ ದೇಶಗಳಲ್ಲಿ ಕೈಗೊಂಡ ಅಧ್ಯಯನದಲ್ಲಿ ಕೂಡ ಕಳಪೆ ಸಾಧನೆ ಕಾಣಸಿಗುತ್ತದೆ: ಎಲ್ಲ ಆರು ದೇಶಗಳಲ್ಲಿ ಐದನೇ ತರಗತಿಯ ವಿದ್ಯಾರ್ಥಿಗಳ ಪೈಕಿ ಶೇಕಡಾ 43ರಷ್ಟು ವಿದ್ಯಾರ್ಥಿಗಳ ಫ್ರೆಂಚ್ ಅಥವಾ ಗಣಿತಶಾಸ್ತ್ರದಲ್ಲಿನ ಸಾಧನೆಯು ಅತ್ಯಂತ "ಕಡಮೆ" ಮಟ್ಟದಲ್ಲಿತ್ತು ಮತ್ತು ಸೆನೆಗಲ್‌ನಲ್ಲಿ ಶೇಕಡಾ 40ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ದಶಮಾಂಶ ಪದ್ಧತಿಯಲ್ಲಿ ಸಂಖ್ಯೆಗಳನ್ನು ಕ್ರಮವಾಗಿ ಬರೆಯುವಲ್ಲಿ ವಿಫಲರಾದರು.[22] ಗುಣಮಟ್ಟದ ಶಿಕ್ಷಣವನ್ನು ಸಾಧಿಸುವುದು ಕೈಗಾರಿಕೀಕರಣಗೊಂಡ ರಾಷ್ಟ್ರಗಳಲ್ಲಿ ಕೂಡ ಒಂದು ಸವಾಲಾಗಿದೆ. ಇತ್ತೀಚಿನ ಅಧ್ಯಯನಗಳು ಶ್ರೀಮಂತ ರಾಷ್ಟ್ರಗಳಲ್ಲಿನ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಇಂದಿನ ಜಗತ್ತಿನಲ್ಲಿ ಸಮರ್ಥರಾಗಲು ಅಗತ್ಯವಾದ ಮೂಲಭೂತ ಕೌಶಲ್ಯಗಳನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ ಎಂಬುದನ್ನು ತೋರಿಸುತ್ತವೆ.[23]

ಬಾಂಗ್ಲಾದೇಶದ ಡಾಕಾರ್ ನಲ್ಲಿ 2000ನೇ ಇಸವಿಯಲ್ಲಿ ಜರುಗಿದ ವಿಶ್ವ ಶೈಕ್ಷಣಿಕ ಸಮಾವೇಶದಲ್ಲಿ ಅಳವಡಿಸಿಕೊಂಡ ಕಾರ್ಯಯೋಜನೆ ಚೌಕಟ್ಟಿನಲ್ಲಿ (Dakar Framework for Action) ಸೂಚಿಸಲಾದ ಶಿಕ್ಷಣದ ಗುಣಮಟ್ಟದ ಮಾನದಂಡಗಳು ಮತ್ತು Committee on the Rights of the Child (ಮಕ್ಕಳ ಹಕ್ಕುಗಳ ಸಮಿತಿ) ವಿವರಿಸಿದ ಶಿಕ್ಷಣದ ಗುರಿಗಳಿಗೆ ಅನುಗುಣವಾಗಿ, ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು, ಮಗುವಿನ ಸಮಯ ಸಂದರ್ಭಕ್ಕೆ ಪ್ರಸ್ತುತವಾಗಿರುವ ಪಠ್ಯಕ್ರಮ, ಶಿಕ್ಷಕರ ಪಾತ್ರ ಮತ್ತು ಕಲಿಕಾ ಪರಿಸರದ ವಾತಾವರಣಕ್ಕೆ ಗಮನವನ್ನು ನೀಡಬೇಕು. ಹಕ್ಕು-ಆಧಾರಿತ ವಿಧಾನವು ಮಕ್ಕಳು ಶಾಲೆಯಲ್ಲಿದ್ದಾಗ, ಮನುಷ್ಯರಾಗಿ ಅವರ ಹಕ್ಕುಗಳನ್ನು ಗುರುತಿಸುವ ಮತ್ತು ಗೌರವಿಸುವ ಬದ್ಧತೆಯನ್ನು ಎತ್ತಿಹಿಡಿಯುತ್ತದೆ. ಇದು ವಿದ್ಯಾರ್ಥಿಯ ಅಸ್ಮಿತೆ(identity), ಪ್ರಜ್ಞಾಪೂರ್ವಕವಾಗಿ, ಪರ್ಯಾಲೋಚನೆಯನ್ನು ಒಳಗೊಂಡು, ಸೃಜನಾತ್ಮಕವಾಗಿ ತನ್ನ ಪರಿಸರವನ್ನು ಅರ್ಥಮಾಡಿಕೊಂಡು, ಕೆಲಸ ಮಾಡಲು ವ್ಯಕ್ತಿಗಿರುವ ಸಾಮರ್ಥ್ಯ (agency) ಮತ್ತು

ದೈಹಿಕ ಮತ್ತು ಮಾನಸಿಕ ಸಮಗ್ರತೆ(integrity)ಗೆ ಗೌರವ ಕೊಡುವುದನ್ನು ಒಳಗೊಂಡಿದೆ. ಇದು ಮಕ್ಕಳು ಶಾಲಾ ವಿದ್ಯಾಭ್ಯಾಸವನ್ನು ತೊಡಕಿಲ್ಲದೆ ಮುಂದುವರಿಸಲು ಅವಕಾಶ ಕೊಡುವುದಲ್ಲದೆ, ಶಿಕ್ಷಣದ ಪ್ರಕ್ರಿಯೆಯನ್ನು ಸಬಲೀಕರಿಸುತ್ತದೆ, ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತದೆ ಮತ್ತು ಪ್ರಕ್ರಿಯೆಯನ್ನು ಪಾರದರ್ಶಕವಾಗಿಯೂ, ಹೆಚ್ಚು ಜವಾಬ್ದಾರಿಯುತವೂ ಮಾಡುತ್ತದೆ. ಮಕ್ಕಳಿಗೆ ತಾರತಮ್ಯದಿಂದ ಬಿಡುಗಡೆ ದೊರೆಯದೆ ಹೋದರೆ, ಅವರ ಜೀವನ ಮಟ್ಟದಲ್ಲಿ ಸುಧಾರಣೆ ಸಾಧ್ಯವಾಗದೆ ಇದ್ದರೆ, ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಅರ್ಥಪೂರ್ಣ ಭಾಗವಹಿಸುವಿಕೆಯ ಅವರ ಹಕ್ಕುಗಳಿಗೆ ಮಾನ್ಯತೆ ದೊರೆಯದೆ ಹೋದರೆ, ಮಕ್ಕಳು ಶಿಕ್ಷಣದಿಂದ ಹೊರಗುಳಿಯುತ್ತಾ ಹೋಗುತ್ತಾರೆ. ಮಕ್ಕಳ ಆರೋಗ್ಯ ಮತ್ತು ಯೋಗಕ್ಷೇಮದ ಹಕ್ಕನ್ನು ಪರಿಗಣಿಸದೆ ಹೋದರೆ ಗುಣಮಟ್ಟದ ಶಿಕ್ಷಣವನ್ನು ಸಾಧಿಸಲಾಗುವುದಿಲ್ಲ. ಅವಮಾನಕರ ಶಿಕ್ಷೆ ಅಥವಾ ದೈಹಿಕ ದೌರ್ಜನ್ಯಕ್ಕೆ ಒಳಗಾಗುವ ಮಕ್ಕಳು ತಮ್ಮ ಬೆಳವಣಿಗೆಗೆ ಸಹಜವಾಗಿ ದಕ್ಕಬೇಕಾದ ಅತ್ಯುತ್ತಮ ಬೆಳವಣಿಗೆ(optimum development )ಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.

ಈ ಪರಿಕಲ್ಪನಾ ಚೌಕಟ್ಟು ಶಿಕ್ಷಣಕ್ಕೆ ಅಗತ್ಯವಾದ, ಎಲ್ಲಾ ಮಾನವ ಹಕ್ಕುಗಳ ಸಾರ್ವತ್ರಿಕತೆ ಮತ್ತು ಅವಿಭಾಜ್ಯತೆಯನ್ನು ಪ್ರತಿಬಿಂಬಿಸುವ ಸಮಗ್ರ ವಿಧಾನದ ಅಗತ್ಯವನ್ನು ಎತ್ತಿ ತೋರಿಸುತ್ತದೆ. ಈ ಕೆಳಗಿನ ವಿಭಾಗಗಳು, ಮೇಲ್ಕಾಣಿಸಿದ ಮೂರು ಆಯಾಮಗಳಲ್ಲಿ ಇರಬೇಕಾದ ಪ್ರಮುಖ ಅಂಶಗಳನ್ನು ನಿಗದಿಪಡಿಸುತ್ತವೆ.

| | |
|---|---|
| 1. ಶಿಕ್ಷಣಕ್ಕೆ ಅವಕಾಶದ ಹಕ್ಕು | • ಸಮಾನ ಅವಕಾಶ<br>• ಬಾಲ್ಯದ ಎಲ್ಲಾ ಹಂತಗಳು ಮತ್ತು ಆನಂತರದಲ್ಲಿ ಶಿಕ್ಷಣ<br>• ಶಿಕ್ಷಣಕ್ಕೆ ಅವಕಾಶ<br>• ಸಮಾನ ಅವಕಾಶ |
| 2. ಗುಣಮಟ್ಟದ ಶಿಕ್ಷಣದ ಹಕ್ಕು | • ವಿಶಾಲವೂ, ಪ್ರಸ್ತುತವೂ ಮತ್ತು ಸಮನ್ವಯಕಾರಿಯೂ ಆದ ಪಠ್ಯಕ್ರಮ<br>• ಹಕ್ಕು ಆಧಾರಿತ ಕಲಿಕೆ ಮತ್ತು ಮೌಲ್ಯಮಾಪನ<br>• ಶಿಶು-ಸ್ನೇಹಿ, ಸುರಕ್ಷಿತ ಮತ್ತು ಆರೋಗ್ಯಕರ ವಾತಾವರಣ |
| 3. ಕಲಿಕಾ ವಾತಾವರಣದಲ್ಲಿ ಗೌರವದಿಂದ ನಡೆಸಿಕೊಳ್ಳಲ್ಪಡುವ ಹಕ್ಕು | • ಅಸ್ಮಿತೆಯ ಬಗ್ಗೆ ಗೌರವ<br>• ಭಾಗವಹಿಸುವಿಕೆಯ ಹಕ್ಕಿನ ಬಗ್ಗೆ ಗೌರವ<br>• ಸಮಗ್ರತೆಯ ಬಗ್ಗೆ ಗೌರವ |

**1. ಶೈಕ್ಷಣಿಕ ಅವಕಾಶದ ಹಕ್ಕು**

**ಶಿಕ್ಷಣಾವಕಾಶದ ಹಕ್ಕುಗಳನ್ನು ಸಾಕ್ಷಾತ್ಕಾರಗೊಳಿಸಲು ಸರ್ಕಾಕಾರಕ್ಕೆ ಇರಬೇಕಾದ ಬದ್ಧತೆಗಳು**

- ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು.
- ಎಲ್ಲರಿಗೂ ಕೈಗೆಟುಕುವಂತಹ ಮಾಧ್ಯಮಿಕ ಶಿಕ್ಷಣದ ರೂಪಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಅಗತ್ಯವಿರುವ ಸಂದರ್ಭಗಳಲ್ಲಿ ಉಚಿತ ಶಿಕ್ಷಣ ಮತ್ತು ಹಣಕಾಸಿನ ನೆರವು ಒದಗಿಸಲು ಕ್ರಮಗಳನ್ನು ಪರಿಚಯಿಸುವುದು.
- ಸೂಕ್ತ ವಿಧಾನಗಳ ಮೂಲಕ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯದ ಆಧಾರದ ಮೇಲೆ ಪಡೆಯಬಹುದಾದಂತಹ ಉನ್ನತ ಶಿಕ್ಷಣದ ಅವಕಾಶವನ್ನು ಕಲ್ಪಿಸುವುದು .
- ಸುಲಭವಾಗಿ ದೊರಕುವಂತೆ ಶೈಕ್ಷಣಿಕ ಮತ್ತು ವೃತ್ತಿಪರ ಮಾಹಿತಿ ಮತ್ತು ಮಾರ್ಗದರ್ಶನವನ್ನು ಒದಗಿಸುವುದು.
- ನಿಯಮಿತ ಹಾಜರಾತಿಯನ್ನು ಉತ್ತೇಜಿಸಲು ಮತ್ತು ಡ್ರಾಪ್-ಔಟ್ ಪ್ರಮಾಣವನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ಪರಿಚಯಿಸುವುದು.
- ಸಮಾನ ಅವಕಾಶದ ಆಧಾರದ ಮೇಲೆ ಶಿಕ್ಷಣವನ್ನು ಒದಗಿಸುವುದು.
- ಯಾವುದೇ ನೆಲೆಯಲ್ಲಿ, ಯಾವುದೇ ರೀತಿಯ ತಾರತಮ್ಯವಿಲ್ಲದೆ ಶಿಕ್ಷಣದ ಹಕ್ಕಿನ ಗೌರವವನ್ನು ಖಚಿತಪಡಿಸಿಕೊಳ್ಳುವುದು.
- ಎಲ್ಲಾ ಹಂತಗಳಲ್ಲಿ ಸಮನ್ವಯ ಶಿಕ್ಷಣ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳುವುದು.
- ವಿಶೇಷ ಅವಶ್ಯಕತೆ ಇರುವ ಮಕ್ಕಳಿಗೆ ಅಗತ್ಯವಾದ ಬೆಂಬಲ ವ್ಯವಸ್ಥೆಯನ್ನು ಒದಗಿಸಿ, ಅವರಿಗೆ ಶಿಕ್ಷಣಕ್ಕೆ ಸೂಕ್ತ ಅವಕಾಶ ದೊರಕುವಂತೆ ನೋಡಿಕೊಂಡು ಅವರು ಸಮಾಜದಲ್ಲಿ ಎಲ್ಲರೊಂದಿಗೆ ಬೆರೆತು ಬಾಳಲು ಶಕ್ತರಾಗುವಂತೆ ಅವರ ಸಮಾರ್ಥ್ಯವರ್ಧನೆ ಮಾಡುವುದು.
- ದೈಹಿಕ, ಮಾನಸಿಕ, ಆಧ್ಯಾತ್ಮಿಕ, ನೈತಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಜೀವನಮಟ್ಟದಲ್ಲಿ ಸುಧಾರಣೆಯನ್ನು ತರುವುದನ್ನು ಖಚಿತಪಡಿಸಿಕೊಳ್ಳುವುದು.
- ನಿರಾಶ್ರಿತರು ಅಥವಾ ಆಶ್ರಯ ಅರಸಿ ಬಂದ ಕುಟುಂಬದ ಮಕ್ಕಳ ಹಕ್ಕುಗಳಿಗೆ ಚ್ಯುತಿ ಬಾರದಂತೆ ಅವರಿಗೆ ಅಗತ್ಯ ರಕ್ಷಣೆ ಮತ್ತು ಸಹಾಯವನ್ನು ಒದಗಿಸುವುದು.
- ಆರ್ಥಿಕ ಶೋಷಣೆ ಮತ್ತು ಶಿಕ್ಷಣಕ್ಕೆ ಅಡ್ಡಿಪಡಿಸುವ ಕೆಲಸದಿಂದ ರಕ್ಷಣೆ ಒದಗಿಸುವುದು.

ಮೂಲ: Article 26, Universal Declaration of Human Rights; articles 2, 22, 23, 27, 28 and 32, Convention on the Rights of the Child; article 13, International Covenant on Economic, Social and Cultural Rights; article 10, Convention on the Elimination of All Forms of Discrimination against Women; articles 4 and 5, UNESCO Convention against Discrimination in Education; article 24, Convention on the Rights of Persons with Disabilities (opened for signature 30 March 2007).

ಶಿಕ್ಷಣಾವಕಾಶದ ಹಕ್ಕು ಮೂರು ಅಂಶಗಳನ್ನು ಒಳಗೊಂಡಿದೆ: ಸರ್ವರಿಗೂ ಶಿಕ್ಷಣ ಯೋಜನೆಯ ಗುರಿಗಳಿಗೆ ಅನ್ವಯವಾಗುವಂತೆ ಬಾಲ್ಯದ ಎಲ್ಲ ಹಂತಗಳಲ್ಲಿ ಮತ್ತು ಅನಂತರ ಶಿಕ್ಷಣಕ್ಕೆ ಅವಕಾಶ; ಮಕ್ಕಳು ಹೋಗಲು ಸಾಧ್ಯವಾಗುವಂತಹ ಶಾಲಾ ವಾತಾವರಣ ಮತ್ತು ಕಲಿಕಾ ಅವಕಾಶಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸುವುದು; ಮತ್ತು ಶಿಕ್ಷಣದ ಸಮಾನ ಅವಕಾಶ.

**ಬಾಲ್ಯದ ಎಲ್ಲ ಹಂತಗಳು ಮತ್ತು ಅನಂತರದಲ್ಲಿ ಶಿಕ್ಷಣ**

ಕಲಿಕೆಯು ಜೀವಮಾನ ಪರ್ಯಂತದ ಪ್ರಕ್ರಿಯೆಯಾಗಿದೆ. ಹಕ್ಕು-ಆಧಾರಿತ ಶಿಕ್ಷಣ ವಿಧಾನವು ಮಕ್ಕಳಿಗೆ ಅವರ ಬಾಲ್ಯ ಮತ್ತು ಅದರಾಚೆಗೂ ಅವರ ಅತ್ಯುನ್ನತ ಸಾಮರ್ಥ್ಯ ಸಾಧನೆಗೆ ಅವಕಾಶಗಳನ್ನು ನಿರ್ಮಿಸಲು ಪ್ರಯತ್ನಿಸುತ್ತದೆ. ಇದಕ್ಕೆ ಜೀವನ-ಚಕ್ರ ಮಾದರಿಯ ವಿಧಾನದ ಅಗತ್ಯವಿದೆ, ಕಲಿಕೆಯಲ್ಲಿ ಹೂಡಿಕೆ ಮಾಡುವುದು ಮತ್ತು ಮಗುವಿನ ಜೀವನದ ಪ್ರತಿ ಹಂತದಲ್ಲೂ ಪರಿಣಾಮಕಾರಿ ಪರಿವರ್ತನೆಗಳಾಗುವಂತೆ ಖಾತ್ರಿಪಡಿಸುವುದು.

ಮಕ್ಕಳ ಹಕ್ಕುಗಳ ಸಮಾವೇಶ((Convention on the Rights of the Child)ವು ಪೂರ್ವಪ್ರಾಥಮಿಕ ಶಿಕ್ಷಣವನ್ನು ಒದಗಿಸಲು ಸರ್ಕಾರಗಳಿಗೆ ಸ್ಪಷ್ಟವಾದ ಜವಾಬ್ದಾರಿಗಳನ್ನು ವಿಧಿಸದಿದ್ದರೂ, ಮಕ್ಕಳ ಹಕ್ಕುಗಳ ಸಮಿತಿ(Committee on the Rights of the Child)ಯು ಶಿಕ್ಷಣದ ಹಕ್ಕನ್ನು ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ ಎಂದು ವ್ಯಾಖ್ಯಾನಿಸುತ್ತದೆ ಮತ್ತು ಮಗು ತನ್ನ ಗರಿಷ್ಠ ಬೆಳವಣಿಗೆ ಸಾಧಿಸುವ (maximum development)ತನ್ನ ಹಕ್ಕಿನೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂದು ವ್ಯಾಖ್ಯಾನಿಸುತ್ತದೆ. ಇದು ಸರ್ಕಾರಗಳು ಸಣ್ಣ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಅವರ ಯೋಗಕ್ಷೇಮವನ್ನು ನೋಡಿಕೊಳ್ಳಲು ಅಭಿವೃದ್ಧಿಪಡಿಸಲಾದ ಕಾರ್ಯಕ್ರಮಗಳ ಲಾಭ ಅವರಿಗೆ ತಲಪುವಂತೆ ನೋಡಿಕೊಳ್ಳಲು ಸರ್ಕಾರಗಳಿಗೆ ಕರೆ ನೀಡುತ್ತದೆ ಮತ್ತು ಅತ್ಯುನ್ನತ ಮಟ್ಟದ ಅಭಿವೃದ್ಧಿ(optimum development)ಯ ಹಕ್ಕು, ಪೂರ್ವಪ್ರಾಥಮಿಕ ಹಂತದಲ್ಲಿಯೇ ಮಗು ಕುಟುಂಬದ ವ್ಯವಸ್ಥಿತ ಮತ್ತು ಗುಣಮಟ್ಟದ ಒಳಗೊಳ್ಳುವಿಕೆಯೊಂದಿಗೆ, ಶಿಕ್ಷಣದ ಹಕ್ಕು ಇರುವುದನ್ನು ಸೂಚಿಸುತ್ತದೆ ಎಂದು ಒತ್ತಿಹೇಳುತ್ತದೆ.

ಆರಂಭಿಕ ವರ್ಷಗಳಲ್ಲಿ ಗುಣಮಟ್ಟದ ಶಿಕ್ಷಣದ ಲಭ್ಯತೆಯು ಮುಂದಕ್ಕೆ ಮಗು ಶಾಲೆಗೆ ಸನ್ನದ್ಧತೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಮತ್ತು ಸುಸ್ಥಿರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಮತ್ತು ಸಹಸ್ರಮಾನದ ಅಭಿವೃದ್ಧಿ ಗುರಿ(Millennium Development Goals)ಗಳನ್ನು ಸಾಧಿಸುವಲ್ಲಿ, ಮತ್ತು ಸರ್ವರಿಗೂ ಶಿಕ್ಷಣ (Education for All) ಮತ್ತು ಮಕ್ಕಳಿಗಾಗಿ ಸುಸ್ಥಿರ ಜಗತ್ತು (A World Fit for Children) ಯೋಜನೆಯ ಗುರಿಗಳನ್ನು ಸಾಧಿಸುವಲ್ಲಿ ಪ್ರಮುಖ ಸಾಧನವಾಗಿದೆ.[25] ನೇಪಾಳದಲ್ಲಿ ಕೈಗೊಂಡ ಮಕ್ಕಳ ಅಧ್ಯಯನವೊಂದರ ಪ್ರಕಾರ ಅನೌಪಚಾರಿಕ ಪೂರ್ವಪ್ರಾಥಮಿಕ ಶಾಲೆಗೆ ಹೋದ ಶೇಕಡಾ 95ಕ್ಕಿಂತ ಹೆಚ್ಚು ಮಕ್ಕಳು, ಅಲ್ಲಿಂದ ಮುಂದಕ್ಕೆ ಪ್ರಾಥಮಿಕ ಶಾಲೆಗೆ ದಾಖಲಾಗುತ್ತಾರೆ ಮತ್ತು ಅಲ್ಲಿ ಪೂರ್ವಪ್ರಾಥಮಿಕ ಶಿಕ್ಷಣದ ಅವಕಾಶ ಇಲ್ಲದಿದ್ದ ಮಕ್ಕಳಿಗಿಂತ ಉತ್ತಮವಾಗಿ ಸಾಧನೆ ತೋರಿಸಿದ್ದಾರೆ. ಪೂರ್ವಪ್ರಾಥಮಿಕ ಶಾಲಾ ಅನುಭವ ಇದ್ದ ಗುಂಪಿನ ಸುಮಾರು 80 ಪ್ರತಿಶತ ವಿದ್ಯಾರ್ಥಿಗಳು ಮೊದಲನೆಯ ತರಗತಿಯಲ್ಲಿ ಉತ್ತಮ ಅಂಕಗಳನ್ನು ಪಡೆದು ತೇರ್ಗಡೆಯಾದರೆ, ಆ ಅವಕಾಶ ಇಲ್ಲದ ಗುಂಪಿನ 60 ಪ್ರತಿಶತ ವಿದ್ಯಾರ್ಥಿಗಳು ಒಂದನೆಯ ತರಗತಿ ಉತ್ತೀರ್ಣರಾಗಿದ್ದಾರೆ.[26]

ಮಾನವ ಹಕ್ಕುಗಳ ಕಾನೂನು ಪ್ರತಿ ಮಗುವೂ ಉಚಿತ, ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅರ್ಹತೆಯನ್ನು ಹೊಂದಿದೆ ಎಂದು ದೃಢೀಕರಿಸುತ್ತದೆ, ಆದರೆ ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಬಾಧ್ಯತೆಯ ಮೇಲೆ ಅಷ್ಟು ಒತ್ತು ನೀಡಲಾಗಿಲ್ಲ. ಇದರ ಅಭಿವೃದ್ಧಿಯನ್ನು ಉತ್ತೇಜಿಸುವುದು ಮತ್ತು ಅದನ್ನು ಪ್ರತಿ ಮಗುವಿಗೆ ಲಭ್ಯವಾಗುವಂತೆ ಮಾಡುವುದು ಮತ್ತು ಸಾಧ್ಯವಿರುವಲ್ಲಿ ಅದನ್ನು ಉಚಿತವಾಗಿ ಮಾಡುವುದು ಕರ್ತವ್ಯವಾಗಿದೆ. ಇದಕ್ಕೆ ಸಂಬಂಧಿಸಿದ ಕಾನೂನುಗಳು ದುರ್ಬಲವಾಗಿರುವುದು ಮಾಧ್ಯಮಿಕ ಶಿಕ್ಷಣಕ್ಕೆ ಕಡಮೆ ಬದ್ಧತೆಯನ್ನು ಪ್ರತಿಬಿಂಬಿಸುವುದಿಲ್ಲ, ಬದಲಿಗೆ ಅದನ್ನು ಉಚಿತ ಮತ್ತು ಕಡ್ಡಾಯವಾಗಿ ಮಾಡುವಲ್ಲಿ ಅದು ಪ್ರಸ್ತುತ ಹಲವು ದೇಶಗಳ ಸಂಪನ್ಮೂಲಗಳನ್ನು ಮೀರಿದೆ ಎಂಬುದನ್ನಷ್ಟೆ ಪ್ರತಿಬಿಂಬಿಸುತ್ತದೆ.[27] ಈ ಒಪ್ಪಂದಗಳನ್ನು ಮಾಡಿಕೊಂಡಾಗಿನಿಂದ ಮಾಧ್ಯಮಿಕ ಶಿಕ್ಷಣದ ಮೂಲಭೂತ ಪ್ರಾಮುಖ್ಯದ ಬಗ್ಗೆ ಹೆಚ್ಚಿನ ಅರಿವು ಮೂಡುತ್ತಿದೆ.

ಇದಲ್ಲದೆ, 18ನೇ ವಯಸ್ಸಿಗೆ ಅಭಿವೃದ್ಧಿ/ಬೆಳವಣಿಗೆ ನಿಂತುಹೋಗುವುದಿಲ್ಲ. ಸರ್ವರಿಗೂ ಶಿಕ್ಷಣ ಯೋಜನೆಯ ಮೂರನೇ ಗುರಿಯ ಪ್ರಕಾರ ಶಿಕ್ಷಣವು ಜೀವನದುದ್ದಕ್ಕೂ ನಡೆಯಬೇಕು. ಇದನ್ನು ಎಳೆಯ ಮಕ್ಕಳು ಮತ್ತು ವಯಸ್ಕರ ಶಿಕ್ಷಣದ ಅಗತ್ಯಗಳನ್ನು ಶಿಕ್ಷಣ ಮತ್ತು ಜೀವನ ಕೌಶಲ್ಯ ಕಾರ್ಯಕ್ರಮಗಳ ಅವಕಾಶಗಳನ್ನು ಒದಗಿಸುವ ಮೂಲಕ ಸಾಧ್ಯಮಾಡಬೇಕು. ಜವಾಬ್ದಾರಿಯುತ ಸ್ವಾಯತ್ತೆ, ಸ್ವಯಂ-ನಿರ್ದೇಶಿತ ಕಲಿಕೆ ಮತ್ತು ಪೂರ್ಣ ಪೌರತ್ವಕ್ಕಾಗಿ ತಯಾರಿಗಾಗಿ ಶಿಕ್ಷಣದ ಮೂಲಕ, ಸರ್ಕಾರವು ಜೀವನ ಪರ್ಯಂತದ ಕಲಿಕೆಗೆ ಬಲವಾದ ನೆಲೆಯನ್ನು ಸಾಧಿಸುವುದನ್ನು ಬೆಂಬಲಿಸಬೇಕು.

**ಶೈಕ್ಷಣಿಕ ಅವಕಾಶದ ಲಭ್ಯತೆ**

ಸರ್ಕಾರವು, ಪ್ರತಿ ಮಗುವಿಗೆ ಶಿಕ್ಷಣದ ಹಕ್ಕನ್ನು ಪೂರೈಸಲು ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಡೀಕರಿಸಿ, ಅದಕ್ಕೆ ಪೂರಕವಾದ ಶಾಸಕಾಂಗ ಮತ್ತು ಆಡಳಿತ ನೀತಿ ಚೌಕಟ್ಟನ್ನು ಸ್ಥಾಪಿಸುವ ಬಾಧ್ಯತೆಯನ್ನು ಹೊಂದಿದೆ. ಆದ್ದರಿಂದ ಪ್ರತಿ ಮಗುವಿಗೆ

ಕಲಿಕೆಗೆ ಪೂರಕವಾಗುವಂತಹ ಶಾಲಾವಕಾಶ ಅಥವಾ ಕಲಿಕಾ ಅವಕಾಶವನ್ನು ಒದಗಿಸಬೇಕು, ಮತ್ತು ಇದಕ್ಕೆ ಪೂರಕವಾಗಿ ಅರ್ಹ ಶಿಕ್ಷಕರು ಮತ್ತು ಸಾಕಷ್ಟು ಪ್ರಮಾಣದಲ್ಲಿ ಸೂಕ್ತವಾದ ಸಂಪನ್ಮೂಲಗಳು ಮತ್ತು ಸಲಕರಣೆಗಳನ್ನು ಒದಗಿಸಬೇಕು.[28] ಪ್ರಾಥಮಿಕ ಶಿಕ್ಷಣ ಪಡೆಯಲು ಅರ್ಹತೆ ಹೊಂದಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಶಾಲಾ ಶಿಕ್ಷಣದ ವ್ಯವಸ್ಥೆ ಮಾಡಬೇಕು.

ಎಲ್ಲ ಕಲಿಕಾ ಪರಿಸರಗಳು ಸಮಾಜದ ಅತ್ಯಂತ ಅಂಚಿನಲ್ಲಿರುವವರನ್ನು ಒಳಗೊಂಡಂತೆ ಎಲ್ಲರಿಗೂ ಭೌತಿಕವಾಗಿ ಮತ್ತು ಆರ್ಥಿಕವಾಗಿ ಲಭ್ಯವಾಗುವಂತಿರಬೇಕು. ಒಂದು ಮಗುವಿಗೆ ಕೈಗೆಟುಕಬಹುದಾದಂತಹ ಶಾಲೆಯು ಇನ್ನೊಂದು ಮಗುವಿಗೆ ಕೈಗೆಟುಕುವಂತಿರುವುದಿಲ್ಲ ಎಂಬುದನ್ನು ಗುರುತಿಸುವುದು ಮುಖ್ಯವಾಗಿದೆ. ಶಾಲೆಗಳು ಸುರಕ್ಷಿತ ಭೌತಿಕ ವ್ಯಾಪ್ತಿಯೊಳಗೆ ಇರಬೇಕು ಅಥವಾ ತಂತ್ರಜ್ಞಾನದ ಮೂಲಕ ಲಭ್ಯವಾಗುವಂತಿರಬೇಕು (ಉದಾಹರಣೆಗೆ, 'ದೂರ ಕಲಿಕೆ' ಕಾರ್ಯಕ್ರಮಕ್ಕೆ ಅವಕಾಶ). ಅವು ಎಲ್ಲರಿಗೂ ಆರ್ಥಿಕವಾಗಿ ಕೂಡ ಕೈಗೆಟುಕುವಂತಿರಬೇಕು.[29]

**ಶಿಕ್ಷಣದ ಸಮಾನ ಅವಕಾಶ**

ಪ್ರತಿ ಮಗುವಿಗೂ ಶಾಲೆಗೆ ಹೋಗುವ ಸಮಾನ ಹಕ್ಕು ಇದೆ. ಈ ಹಕ್ಕನ್ನು ಪೂರೈಸಲು ಶಾಲೆಗೆ ಹೋಗುವ ಅವಕಾಶ ಪ್ರತಿ ಮಗುವಿಗೆ ದೊರಕುವಂತೆ ಮಾಡುವುದು ಈ ನಿಟ್ಟಿನಲ್ಲಿ ಇಡುವ ಒಂದು ಪ್ರಮುಖ ಮೊದಲ ಹೆಜ್ಜೆಯಾಗಿದ್ದರೂ, ಶಿಕ್ಷಣದ ಹಕ್ಕನ್ನು ಸಾಕ್ಷಾತ್ಕಾರಗೊಳಿಸಲು ಇದಷ್ಟೆ ಸಾಕಾಗುವುದಿಲ್ಲ.[30] ಸಮುದಾಯದಲ್ಲಿ ಮತ್ತು ಶಾಲೆಗಳಲ್ಲಿ ಇರುವ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ಮಾತ್ರ ಅವಕಾಶದ ಸಮಾನತೆಯನ್ನು ಸಾಧಿಸಬಹುದು.

ಶಾಲೆಗಳು ಅಸ್ತಿತ್ವದಲ್ಲಿರುವ ಕಡೆ ಕೂಡ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು, ಲಿಂಗಾಧಾರಿತ ತಾರತಮ್ಯ, ಅಂಗವೈಕಲ್ಯ, ಏಡ್ಸ್, ಮನೆಯ ಬಡತನ, ಜನಾಂಗೀಯತೆ, ಅಲ್ಪಸಂಖ್ಯಾತರ ಸ್ಥಿತಿ, ಅನಾಥ ಮತ್ತು ಬಾಲ ಕಾರ್ಮಿಕತೆಯಂತಹ ಅಂಶಗಳೊಂದಿಗೆ ಪರಸ್ಪರ ಸಂಬಂಧಹೊಂದಿದ್ದು, ಮಕ್ಕಳನ್ನು ಶಾಲೆಯಿಂದ ಹೊರಗಿಡಲು ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳ ಶಾಲಾವಕಾಶಕ್ಕೆ ತಡೆಯೊಡ್ಡುವ ಕೌಟುಂಬಿಕ ಮತ್ತು ಸಮುದಾಯದಲ್ಲಿನ ಅಡೆತಡೆಗಳನ್ನು ತೆಗೆದುಹಾಕಲು ಕಾನೂನು, ಆಡಳಿತ ನೀತಿಗಳು ಮತ್ತು ಬೆಂಬಲ ಸೇವೆಗಳನ್ನು ಅಭಿವೃದ್ಧಿಪಡಿಸುವ ಬಾಧ್ಯತೆ ಸರ್ಕಾರಗಳ ಮೇಲಿದೆ.

ಶಾಲೆಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೆಲವು ಮಕ್ಕಳ ಶಾಲಾವಕಾಶಕ್ಕೆ ಅಡ್ಡಿಯುಂಟುಮಾಡಬಹುದು, ಉದಾಹರಣೆಗೆ, ಪುರುಷ ಪ್ರಧಾನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಮೂಲಕ, ಹಿಂಸೆ ಮತ್ತು ಲೈಂಗಿಕ ದೌರ್ಜನ್ಯದ ಮಾದರಿಗಳು ಅಥವಾ ಜಾತಿ ಪಕ್ಷಪಾತದಂತಹ ಚಾಲ್ತಿಯಲ್ಲಿರುವ ಸಾಮಾಜಿಕ ಪಿಡುಗುಗಳ ಮೂಲಕ. ಬಾಲಕಿಯರ ಬಗೆಗಿನ ಶಿಕ್ಷಕರ ನಕಾರಾತ್ಮಕ ವರ್ತನೆಗಳು, ಪಠ್ಯಕ್ರಮದಲ್ಲಿನ ಪೂರ್ವಗ್ರಹಗಳು, ಮಹಿಳಾ ಶಿಕ್ಷಕರು ಮತ್ತು ಮಾದರಿ ವ್ಯಕ್ತಿಗಳು/ವ್ಯಕ್ತಿಚಿತ್ರಣಗಳ ಕೊರತೆ, ಮತ್ತು ನೈರ್ಮಲ್ಯ ಮತ್ತು ಸ್ವಚ್ಛತೆಯ ವ್ಯವಸ್ಥೆಯ ಕೊರತೆಯು ದಾಖಲಾತಿಗೆ, ಅಪೇಕ್ಷಿತ ಮಟ್ಟದಲ್ಲಿ ಸಾಧನೆ ಮಾಡುವುದಕ್ಕೆ ಅಡ್ಡಿಯುಂಟುಮಾಡುತ್ತದೆ ಮತ್ತು ಹೆಚ್ಚಿನ ಡ್ರಾಪ್-ಔಟ್ ಪ್ರಮಾಣಕ್ಕೆ ಕಾರಣವಾಗುತ್ತದೆ.[31] ಶಾಲೆಗಳು ವಿಕಲಾಂಗ ಅಥವಾ ಏಡ್ಸ್ ಹೊಂದಿರುವ ಮಕ್ಕಳನ್ನು ಸೇರಿಸಿಕೊಳ್ಳಲು ನಿರಾಕರಿಸಬಹುದು. ಶಾಲಾ ವ್ಯವಸ್ಥೆಯಲ್ಲಿ ಹೊಂದಾಣಿಕೆಗೆ ಅವಕಾಶ ಇಲ್ಲದಿರುವುದು ಹೊರಗೆ ಕೆಲಸಕ್ಕೆ ಹೋಗುವ ಅನೇಕ ಮಕ್ಕಳನ್ನು ಶಾಲಾವಕಾಶದಿಂದ ವಂಚಿತರನ್ನಾಗಿ ಮಾಡುತ್ತದೆ. ಎಲ್ಲರನ್ನು ಒಳಗೊಳ್ಳುವ ಮತ್ತು ತಾರತಮ್ಯವಿಲ್ಲದ ಶಿಕ್ಷಣವನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರಗಳು ಕ್ರಮ ಕೈಗೊಳ್ಳಬೇಕು ಮತ್ತು ಪ್ರತಿ ಮಗುವಿಗೆ ಹಾಜರಾಗಲು ಸಮಾನ ಅವಕಾಶವನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಹೊಂದಾಣಿಕೆಗಳನ್ನು ಮಾಡಬೇಕು.

**ಗುಣಮಟ್ಟದ ಶಿಕ್ಷಣದ ಹಕ್ಕು**

ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಒದಗಿಸಲು ಮತ್ತು ಶೈಕ್ಷಣಿಕ ಗುಣಮಟ್ಟದ ಎಲ್ಲ ಅಂಶಗಳನ್ನು ಸುಧಾರಿಸಲು, ಡಾಕಾರ್ ಕ್ರಿಯಾ ಚೌಕಟ್ಟು (Dakar Framework for Action) ಎಲ್ಲಾ ರಾಷ್ಟ್ರಗಳು ಬದ್ಧವಾಗುವಂತೆ ಸಾರುತ್ತದೆ.[32] 'ಗುಣಮಟ್ಟ' ಎಂಬುದಕ್ಕೆ ಯಾವುದೇ ಒಂದು ವ್ಯಾಖ್ಯಾನ ಲಭ್ಯವಿಲ್ಲದಿದ್ದರೂ, ಅದನ್ನು ವ್ಯಾಖ್ಯಾನಿಸುವ ಹೆಚ್ಚಿನ ಪ್ರಯತ್ನಗಳು ಎರಡು ಮೂಲಭೂತ ದೃಷ್ಟಿಕೋನಗಳನ್ನು ಒಳಗೊಂಡಿವೆ. ಮೊದಲನೆಯದಾಗಿ, ಮಗುವಿನ ಬೌದ್ಧಿಕ ಬೆಳವಣಿಗೆಯು ಶಿಕ್ಷಣದ ಪ್ರಾಥಮಿಕ ಉದ್ದೇಶವಾಗಿದೆ. ಶಿಕ್ಷಣ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದು ಈ ಉದ್ದೇಶ ಸಾಧನೆಯ ಪ್ರಮಾಣದಲ್ಲಿ ಅಳೆಯಲಾಗುತ್ತದೆ. ಎರಡನೆಯದಾಗಿ, ಶಿಕ್ಷಣವು ಸೃಜನಾತ್ಮಕ ಮತ್ತು ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸಬೇಕು, ಶಾಂತಿ, ಪೌರತ್ವ ಮತ್ತು ಭದ್ರತೆಯ ಉದ್ದೇಶಗಳನ್ನು ಬೆಂಬಲಿಸಬೇಕು, ಸಮಾನತೆಯನ್ನು ಪೋಷಿಸಬೇಕು ಮತ್ತು ಭವಿಷ್ಯದ ಪೀಳಿಗೆಗೆ ಜಾಗತಿಕ ಮತ್ತು ಸ್ಥಳೀಯ ಸಾಂಸ್ಕೃತಿಕ ಮೌಲ್ಯಗಳನ್ನು ರವಾನಿಸಬೇಕು.

## ಗುಣಮಟ್ಟದ ಶಿಕ್ಷಣದ ಹಕ್ಕನ್ನು ಖಚಿತಪಡಿಸುವಲ್ಲಿ ಸರ್ಕಾರದ ಬಾಧ್ಯತೆಗಳು

- ಮಕ್ಕಳ ವ್ಯಕ್ತಿತ್ವ, ಅವರ ಪ್ರತಿಭೆ ಮತ್ತು ಮಾನಸಿಕ ಮತ್ತು ದೈಹಿಕ ಸಾಮರ್ಥ್ಯಗಳನ್ನು ಅದರ ಸಂಪೂರ್ಣ ಸಾಮರ್ಥ್ಯಸಾಧನೆಯ ಮಟ್ಟ(fullest potential)ಕ್ಕೆ ಅಭಿವೃದ್ಧಿಪಡಿಸುವುದು.
- ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳಿಗೆ ಗೌರವ ಕೊಡುವುದನ್ನು ಉತ್ತೇಜಿಸುವುದು ಮತ್ತು ಶಾಂತಿ, ಸಹನೆ, ಸಮಾನತೆ ಮತ್ತು ಸ್ನೇಹ ಭಾವನೆಯಲ್ಲಿ ಜವಾಬ್ದಾರಿಯುತ ಜೀವನಕ್ಕಾಗಿ ಮಕ್ಕಳನ್ನು ಸಿದ್ಧಪಡಿಸುವುದು.
- ಮಗುವಿನ, ಅವನ ಅಥವಾ ಅವಳ ಪೋಷಕರ ಮತ್ತು ಇತರರ ಸಾಂಸ್ಕೃತಿಕ ಅಸ್ಮಿತೆ, ಭಾಷೆ ಮತ್ತು ಮೌಲ್ಯಗಳಿಗೆ ಗೌರವ ಕೊಡುವುದನ್ನು ಬೆಳೆಸುವುದು.
- ನೈಸರ್ಗಿಕ ಪರಿಸರಕ್ಕೆ ಗೌರವ ಕೊಡುವ ಮನೋಧೋರಣೆಯನ್ನು ಬೆಳೆಸುವುದು.
- ವಿವಿಧ ಮಾಹಿತಿ ಮೂಲಗಳಿಂದ ಮಾಹಿತಿ ದೊರಕುವ ಅವಕಾಶಗಳು ಇರುವುದನ್ನು ಖಚಿತಪಡಿಸಿಕೊಳ್ಳುವುದು.
- ಮಕ್ಕಳ ಹಿತದೃಷ್ಟಿಯನ್ನು ಎಲ್ಲಕಿಂತ ಮಿಗಿಲಾದ ಪ್ರಾಥಮಿಕ ಕಾಳಜಿಯಾಗಿ ಪರಿಗಣಿಸಬೇಕಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಮಕ್ಕಳು ತಮ್ಮ ಹಕ್ಕುಗಳನ್ನು ಬಳಸುವಲ್ಲಿ ಅವರ ಸಾಮರ್ಥ್ಯ ಇನ್ನೂ ವಿಕಸನಗೊಳ್ಳುವ ಸ್ಥಿತಿಯಲ್ಲಿದೆ ಎಂಬ ಅಂಶದ ಬಗ್ಗೆ ಗೌರವ ಬೆಳೆಸುವುದು.
- ವಿಶ್ರಾಂತಿ, ಆರಾಮ, ಆಟ, ಮನರಂಜನೆ ಮತ್ತು ಕಲೆ ಮತ್ತು ಸಂಸ್ಕೃತಿಯಲ್ಲಿ ಭಾಗವಹಿಸುವ ಮಕ್ಕಳ ಹಕ್ಕನ್ನು ಗೌರವಿಸುವುದು.

ಮೂಲ: Article 26, Universal Declaration of Human Rights; articles 3, 5, 6, 12, 17, 29, 31, Convention on the Rights of the Child; article 13, International Covenant on Economic, Social and Cultural Rights; and article 24, International Convention on the Rights of Persons with Disabilities (opened for signature 30 March 2007).

ಈ ದೃಷ್ಟಿಕೋನಗಳನ್ನು ಮಕ್ಕಳ ಹಕ್ಕುಗಳ ಸಮಾವೇಶ(Convention on the Rights of the Child)ದಲ್ಲಿ ನಿಗದಿಪಡಿಸಿದ ಶಿಕ್ಷಣದ ಗುರಿಗಳೊಂದಿಗೆ ಸಮೀಕರಿಸಲಾಗಿದೆ. ಇದು ಪ್ರತಿ ಮಗುವನ್ನು 'ವಿಶಿಷ್ಟ ಗುಣಲಕ್ಷಣಗಳು, ಆಸಕ್ತಿಗಳು, ಸಾಮರ್ಥ್ಯಗಳು ಮತ್ತು ಅಗತ್ಯಗಳು' ಇರುವ ವ್ಯಕ್ತಿಗಳಾಗಿ ಗೌರವಿಸುವ ತಾತ್ತ್ವಿಕ ನೆಲೆಗಟ್ಟಿನ ಮೇಲೆ ರೂಪಿತವಾಗಿದೆ.[33] ಇದು ಮಕ್ಕಳ ಗರಿಷ್ಠ ಬೆಳವಣಿಗೆಯನ್ನು ಉತ್ತೇಜಿಸುವ ಶಿಕ್ಷಣವನ್ನು ಒದಗಿಸುವ ಬಾಧ್ಯತೆಗಳ ಚೌಕಟ್ಟನ್ನು ಅಭಿವೃದ್ಧಿಪಡಿಸಿದೆ. ಇದರ 29ನೇ ವಿಧಿಯು "ಶಿಕ್ಷಣವು ಶಿಶು ಕೇಂದ್ರಿತವಾಗುವ, ಶಿಶು ಸ್ನೇಹಿಯಾಗುವ ಮತ್ತು ಸಬಲೀಕರಣದ ಅಗತ್ಯವನ್ನು ಸೂಚಿಸುತ್ತದೆ, ಮತ್ತು ಶೈಕ್ಷಣಿಕ

ಪ್ರಕ್ರಿಯೆಗಳು ಅದು ಪ್ರತಿಪಾದಿಸುವ ತತ್ತ್ವಗಳ ಮೇಲೆ ಆಧಾರಿತವಾಗಿರಬೇಕಾದ ಅಗತ್ಯವನ್ನು ಎತ್ತಿ ತೋರಿಸುತ್ತದೆ."[34] ಪ್ರತಿ ಮಗುವಿಗೆ ಜೀವನ ಕೌಶಲ್ಯಗಳು, ಕಲಿಕೆ ಮತ್ತು ಇತರ ಸಾಮರ್ಥ್ಯಗಳು, ಸ್ವಾಭಿಮಾನ ಮತ್ತು ಆತ್ಮ ವಿಶ್ವಾಸವನ್ನು ಅಭಿವೃದ್ಧಿಪಡಿಸುವ ಮೂಲಕ ತನ್ನನ್ನು ಸಬಲೀಕರಿಸಬಲ್ಲಂತಹ ಗುಣಮಟ್ಟದ ಶಿಕ್ಷಣವನ್ನು ಪಡೆಯುವ ಹಕ್ಕಿದೆ. ಗುಣಮಟ್ಟದ ಶಿಕ್ಷಣವು ಪಠ್ಯಕ್ರಮದ ವಿಷಯ, ಬೋಧನೆಯ ಸ್ವರೂಪ ಮತ್ತು ಕಲಿಕೆಯ ವಾತಾವರಣದಲ್ಲಿ ಹೆಚ್ಚಿನ ಗುಣಮಟ್ಟವನ್ನು ಒದಗಿಸುವ ನಿಟ್ಟಿನಲ್ಲಿ ನೀತಿ ನಿರೂಪಕರ ಗಮನವನ್ನು ಸೆಳೆಯುತ್ತದೆ. ಇದು ಎಲ್ಲ ಮಕ್ಕಳ ಅಗತ್ಯಗಳಿಗೆ ಸ್ಪಂದಿಸುವಂತಹ, ಹೊಂದಾಣಿಕೆಗಳಿಗೆ ಅವಕಾಶ ಇರುವಂತಹ, ಪರಿಣಾಮಕಾರಿ ಮತ್ತು ಪರಸ್ಪರ ಗೌರವಾಧಾರಗಳಿಂದ ಕೂಡಿದ ಕಲಿಕೆಯ ಪರಿಸರವನ್ನು ರಚಿಸುವ ಅಗತ್ಯವನ್ನು ಸೂಚಿಸುತ್ತದೆ.

**ವಿಶಾಲ, ಪ್ರಸ್ತುತ ಮತ್ತು ಸಮನ್ವಯ ಪಠ್ಯಕ್ರಮ**

ಹಕ್ಕು-ಆಧಾರಿತ ಶಿಕ್ಷಣಕ್ಕೆ ಅಗತ್ಯವಾದ ವಿಷಯ ಮತ್ತು ವ್ಯಾಪ್ತಿಯ ಬಗ್ಗೆ ಇರುವ ಜಾಗತಿಕ ಒಮ್ಮತದ ಆಧಾರದ ಮೇಲೆ, ಎಲ್ಲ ಪ್ರಮುಖ ಮಾನವ ಹಕ್ಕುಗಳ ಒಪ್ಪಂದಗಳಲ್ಲಿ, ಪಠ್ಯಕ್ರಮದ ಅಭಿವೃದ್ಧಿಗಾಗಿ ಸಾಮಾನ್ಯ ಮಾರ್ಗದರ್ಶನವನ್ನು ಒದಗಿಸಲಾಗಿದೆ.

ಪಠ್ಯಕ್ರಮವು ಪ್ರತಿ ಮಗುವಿಗೆ ಮುಖ್ಯವಾದ ಶೈಕ್ಷಣಿಕ ಸಾಮರ್ಥ್ಯ ಮತ್ತು ಮೂಲಭೂತ ಬೌದ್ಧಿಕ ಕೌಶಲ್ಯಗಳನ್ನು ಪಡೆಯಲು ಅನುವು ಮಾಡಿಕೊಡಬೇಕು, ಮತ್ತು ಅದರ ಜೊತೆ ಜೊತೆಗೆ ಮಕ್ಕಳನ್ನು ಜೀವನದ ಸವಾಲುಗಳನ್ನು ಎದುರಿಸಲು ಅಗತ್ಯವಾದ ಜೀವನ ಕೌಶಲಗಳನ್ನು, ಸಮಚಿತ್ತದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು, ಮತ್ತು ಆರೋಗ್ಯಕರ ಜೀವನಶೈಲಿ, ಉತ್ತಮ ಸಾಮಾಜಿಕ ಸಂಬಂಧಗಳು, ವಿಮರ್ಶಾತ್ಮಕ ಚಿಂತನೆ ಮತ್ತು ಅಹಿಂಸಾತ್ಮಕ ಸಂಘರ್ಷ ಪರಿಹಾರಕ್ಕಾಗಿ ಅಗತ್ಯವಿರುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಮಕ್ಕಳನ್ನು ಸಜ್ಜುಗೊಳಿಸಬೇಕು. ಇದು ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ಬಗ್ಗೆ ಗೌರವವನ್ನು ಬೆಳೆಸಬೇಕು ಮತ್ತು ವಿಭಿನ್ನ ಸಂಸ್ಕೃತಿಗಳು ಮತ್ತು ಮೌಲ್ಯಗಳಿಗೆ ಗೌರವ ಕೊಡುವುದನ್ನು ಕಲಿಸಬೇಕು ಮತ್ತು ನೈಸರ್ಗಿಕ ಪರಿಸರಕ್ಕೆ ಗೌರವ ಕೊಡುವುದನ್ನು ಉತ್ತೇಜಿಸಬೇಕು. ಮಕ್ಕಳ ಹಕ್ಕುಗಳ ಸಮಿತಿ(Committee on the Rights of the Child)ಯು ಪೂರ್ವಪ್ರಾಥಮಿಕ ಮತ್ತು ಶಾಲಾ ಹಂತದ ಪಠ್ಯಕ್ರಮವು, "ಮಗುವಿನ ಸಾಮಾಜಿಕ, ಸಾಂಸ್ಕೃತಿಕ, ಪರಿಸರ ಮತ್ತು ಆರ್ಥಿಕ ಸನ್ನಿವೇಶಕ್ಕೆ ಮತ್ತು ಅವನ ಅಥವಾ ಅವಳ ಪ್ರಸ್ತುತ ಮತ್ತು ಭವಿಷ್ಯದ ಅಗತ್ಯಗಳಿಗೆ ನೇರವಾಗಿ ಪ್ರಸ್ತುತತೆಯನ್ನು ಹೊಂದಿರಬೇಕು ಮತ್ತು ಮಗುವಿನ ವಿಕಸನಗೊಳ್ಳುತ್ತಿರುವ ಸಾಮರ್ಥ್ಯಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳಬೇಕು," ಎಂದು ಸೂಚಿಸುತ್ತದೆ.[35] (ಅನುಬಂಧ V, ಪುಟ 128 ನೋಡಿ).

ಎಲ್ಲರನ್ನೂ ಒಳಗೊಳ್ಳುವಂತೆ ರೂಪಿಸಲಾದ ಪಠ್ಯಕ್ರಮವು, ವಿಭಿನ್ನ ಅಥವಾ ಕಷ್ಟಕರ ಸಂದರ್ಭಗಳಲ್ಲಿರುವ ಮಕ್ಕಳ ಅಗತ್ಯಗಳಿಗೆ ಅನುಗುಣವಾಗಿರಬೇಕು. ಎಲ್ಲ ಬೋಧನೆ ಮತ್ತು ಕಲಿಕಾ ಸಾಮಗ್ರಿಗಳು ಲಿಂಗ ತಾರತಮ್ಯ ಮತ್ತು ಯಾವುದೇ ರೀತಿಯ ಜನಾಂಗೀಯ ಅಥವಾ ಸ್ಥಳೀಯ ಸಮುದಾಯಗಳಿಗೆ ಹಾನಿಯುಂಟುಮಾಡುವ ಅಥವಾ ಅವರ ಋಣಾತ್ಮಕ ಚಿತ್ರಣದಿಂದ ಮುಕ್ತವಾಗಿರಬೇಕು. ಎಲ್ಲ ವಿಶೇಷ ಆವಶ್ಯಕತೆ ಇರುವ ಮಕ್ಕಳಿಗೆ ತಮ್ಮ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಅಗತ್ಯವಾದ ಬ್ರೈಲ್ ಲಿಪಿ ಅಥವಾ ಸಂಕೇತ ಭಾಷೆಯನ್ನು ಕಲಿಯಲು ಮತ್ತು ಅವರ ಓಡಾಟಕ್ಕೆ ಅನುಕೂಲವಾಗುವ ತರಬೇತಿ(orientation and movement)ಯನ್ನು ಒದಗಿಸಬೇಕು.

**ಹಕ್ಕು ಆಧಾರಿತ ಕಲಿಕೆ ಮತ್ತು ಮೌಲ್ಯಮಾಪನ**

ಮಕ್ಕಳಿಗೆ ಯಾವ ರೀತಿಯಾಗಿ ಕಲಿಕೆಯ ಅವಕಾಶವನ್ನು ಒದಗಿಸಲಾಗಿದೆಯೋ ಅದು ಅವರು ಏನನ್ನು ಕಲಿಯುತ್ತಿದ್ದಾರೆ ಎಂಬುದರಷ್ಟೆ ಮುಖ್ಯವಾಗುತ್ತದೆ. ಮಕ್ಕಳು ನಿಶ್ಯಬ್ದವಾಗಿ ಕುಳಿತುಕೊಂಡು, ಶಿಕ್ಷಕರು ಹೇಳಿದ್ದನ್ನಷ್ಟೆ ಮರುಮಾತನಾಡದೆ,

ನಿಷ್ಕ್ರಿಯವಾಗಿ ಕಲಿಯುವ ಶಾಲಾ ಶಿಕ್ಷಣದ ಸಾಂಪ್ರದಾಯಿಕ ಮಾದರಿಗಳು ಹಕ್ಕು-ಆಧಾರಿತ ಕಲಿಕಾ ವಿಧಾನದೊಂದಿಗೆ ಹೊಂದಿಕೆಯಾಗುವುದಿಲ್ಲ.

ಕಲಿಕೆಯ ಪ್ರಕ್ರಿಯೆಯಲ್ಲಿ ಮಕ್ಕಳು ಮತ್ತು ಯುವಜನರ ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಬೇಕು ಮತ್ತು ಗೌರವಿಸಬೇಕು. ವಿದ್ಯಾರ್ಥಿಗಳು ನಾವು ಧಾರೆ ಎರೆಯುವ ಶಿಕ್ಷಣದ, ಜ್ಞಾನದ ಮರುಮಾತಿಲ್ಲದೆ ಬೊಗಸೆ ಒಡ್ಡಿ ಸ್ವೀಕರಿಸುವ ಕಲಿಕಾರ್ಥಿಗಳೆಂದು ಪರಿಗಣಿಸದೆ, ತಮಗೆ ಏನನ್ನು ಕಲಿಯಬೇಕು, ಹೇಗೆ ಕಲಿಯಬೇಕು ಎಂದು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇರುವ, ತಮ್ಮ ಕಲಿಕೆಗೆ ತಾವೇ ಸಕ್ರಿಯ ಕೊಡುಗೆ ಕೊಡಬಲ್ಲಂತಹ ಸಾಮರ್ಥ್ಯ ಇರುವ ವ್ಯಕ್ತಿಗಳು ಎಂದು ಪರಿಗಣಿಸಬೇಕು.[36] ಹಾಗೆಯೇ ಯಾವುದೇ ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಕೌಶಲ ಮತ್ತು ಜ್ಞಾನವನ್ನು ಪಡೆದುಕೊಳ್ಳುವ ಅವರ ಸಾಮರ್ಥ್ಯವು ನಾವು ಪೂರ್ವ ನಿಗದಿಗೊಳಿಸಿದ ವಯಸ್ಸಿನಲ್ಲಿ, ನಾವು ನಿಗದಿಪಡಿಸಿದ ಮೈಲುಗಲ್ಲುಗಳಿಗನುಸಾರವಾಗಿ ನಡೆಯಬೇಕಾಗಿಲ್ಲ, ಅದು ಮಕ್ಕಳಲ್ಲಿ ನಿರಂತರವಾಗಿ, ವಿಭಿನ್ನವಾಗಿ ವಿಕಸನಗೊಳ್ಳುವ,  ಸಾಮರ್ಥ್ಯ ಎಂಬ ಅಂಶವನ್ನು ಗೌರವವಿಸಬೇಕು.[37] ಕಲಿಕೆ ಮತ್ತು ಬೋಧನೆಯು ಹಲವಾರು ಅಂತರ್ಕ್ರಿಯಾತ್ಮಕ ವಿಧಾನಗಳನ್ನು ಒಳಗೊಂಡಿದ್ದು, ಕಲಿಕಾ ವಾತಾವರಣವನ್ನು ಭಾಗೀದಾರಿಯಾಗಿಯೂ, ಉತ್ತೇಜನಾತ್ಮಕವಾಗಿಯೂ ರೂಪಿಸಬೇಕು. ಒಬ್ಬರಿಂದ ಇನ್ನೊಬ್ಬರಿಗೆ ನೇರ ಗೆರೆ ಎಳೆದಂತೆ, ಜ್ಞಾನವನ್ನು ಸುಮ್ಮನೆ ರವಾನಿಸುವ ಪ್ರಯತ್ನದ ಬದಲಿಗೆ, ಕಲಿಕೆಯ ಅವಕಾಶಗಳನ್ನು ರೂಪಿಸುವಲ್ಲಿ ಅಥವಾ ಅದನ್ನು ಬಲಪಡಿಸುವಲ್ಲಿ ತೊಡಗಿರುವ ಶಿಕ್ಷಕರು ಭಾಗೀದಾರಿ ಕಲಿಕೆಯನ್ನು ಸಾಧ್ಯಮಾಡಬೇಕು. ಕಲಿಕಾ ವಾತಾವರಣವು ಶಿಶು ಸ್ನೇಹಿಯಾಗಿದ್ದು, ಮಕ್ಕಳ ಸಾಮರ್ಥ್ಯಗಳ ಪೂರ್ಣ ಬೆಳವಣಿಗೆಗೆ ಅನುಕೂಲಕರವಾಗಿರಬೇಕು.

ಕಲಿಕೆಯ ಸಾಧನೆಯ ಮೌಲ್ಯಮಾಪನ ಅತ್ಯಗತ್ಯ. ಪರೀಕ್ಷೆಗಳು ಮಕ್ಕಳ ಕಲಿಕಾ ಅಗತ್ಯಗಳನ್ನು ಗುರುತಿಸಲು ಮತ್ತು ಅಗತ್ಯಕ್ಕೆ ತಕ್ಕಂತೆ ಪ್ರತಿ ಮಗುವಿಗೂ ವಿಶೇಷವಾದ ಬೆಂಬಲವನ್ನು ಒದಗಿಸಲು ಅಗತ್ಯವಾದ ಉದ್ದೇಶಿತ ಉಪಕ್ರಮ(targeted initiatives)ಗಳನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುತ್ತವೆ. ಫಲಿತಾಂಶಗಳ ವಿಶ್ಲೇಷಣೆಯು ಸರ್ಕಾರಗಳಿಗೆ ಉದ್ದೇಶಿತ ಶೈಕ್ಷಣಿಕ ಸಾಧನೆ ನಡೆಯುತ್ತಿದೆಯೋ ಎಂದು ನಿರ್ಣಯಿಸಲು ಮತ್ತು ಅದಕ್ಕೆ ತಕ್ಕಂತೆ ಆಡಳಿತ ನೀತಿಯಲ್ಲಿ ಬದಲಾವಣೆಗಳನ್ನು ಮಾಡಲು ಮತ್ತು ಅಗತ್ಯ ಸಂಪನ್ಮೂಲಗಳನ್ನು ಹೊಂದಿಸಲು ಅನುವು ಮಾಡಿಕೊಡುತ್ತದೆ. ಫಲಿತಾಂಶಗಳನ್ನು ಹಂಚಿಕೊಳ್ಳುವುದು ಶಿಕ್ಷಣದಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಅಗತ್ಯ ಅಂಶವಾಗಿದೆ ಮತ್ತು ಇದು ಶಿಕ್ಷಣದ ಗುಣಮಟ್ಟವನ್ನು ಕುರಿತು ಚರ್ಚೆಗಳನ್ನು ಸುಗಮಗೊಳಿಸುತ್ತದೆ. ಅದೇ ಸಮಯದಲ್ಲಿ, ಮಕ್ಕಳ ಹಕ್ಕುಗಳನ್ನು ಅವರ ಸಾಧನೆಯ ಸಾಮರ್ಥ್ಯದ ಅತ್ಯುನ್ನತ ಮಟ್ಟದ ತನಕ ಸಾಧಿಸುವ ಬದ್ಧತೆಯು, ಮಕ್ಕಳ ಶಾಲಾಭ್ಯಾಸವನ್ನು ಸೂಕ್ಷ್ಮ ಮತ್ತು ರಚನಾತ್ಮಕ ವಿಧಾನಗಳ ಮೂಲಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವ ಅಗತ್ಯವನ್ನು ಸೂಚಿಸುತ್ತದೆ. ಹೀಗೆ ಮಾಡುವಾಗ ಮಕ್ಕಳ ವಿಭಿನ್ನ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ನಿರ್ದಿಷ್ಟ ಕಲಿಕೆಯ ಅಗತ್ಯತೆಗಳನ್ನು ಹೊಂದಿರುವವರ ವಿರುದ್ಧ ತಾರತಮ್ಯ ಮಾಡುವುದರ ವಿರುದ್ಧ ಎಚ್ಚರವಹಿಸಬೇಕಾಗುತ್ತದೆ.

**ಶಿಶು ಸ್ನೇಹಿ, ಸುರಕ್ಷಿತ ಮತ್ತು ಆರೋಗ್ಯಕರ ವಾತಾವರಣ**

ಮಕ್ಕಳ ಹಿತಾಸಕ್ತಿಗಳಿಗೆ ಪ್ರಾಮುಖ್ಯ ನೀಡುವ ಮತ್ತು ಅವರ ಅತ್ಯುನ್ನತ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಬಾಧ್ಯತೆಯು, ಮಕ್ಕಳ ಕಲಿಕಾ ವಾತಾವರಣವು ಸ್ವಾಗತಾರ್ಹವಾಗಿಯೂ, ಲಿಂಗ ಸೂಕ್ಷ್ಮವಾಗಿಯೂ, ಆರೋಗ್ಯಕರ, ಸುರಕ್ಷಿತ ಮತ್ತು ರಕ್ಷಣಾತ್ಮಕವಾಗಿಯೂ ಇರಬೇಕು ಎಂದು ನಿರೀಕ್ಷಿಸುತ್ತದೆ. ತೀವ್ರ ಬಡತನ, ತುರ್ತು ಪರಿಸ್ಥಿತಿ ಮತ್ತು ಸಂಘರ್ಷದ ಸಂದರ್ಭಗಳು ಇದಕ್ಕೆ ಅಡ್ಡಿಯಾಗಬಹುದಾದರೂ, ಮಕ್ಕಳು ತಮ್ಮ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಹಾನಿಕಾರಕವಾಗಿರುವಂತಹ ಶಾಲಾ ಪರಿಸರದಲ್ಲಿ ಇರಬೇಕು ಎಂದು ಎಂದಿಗೂ ನಿರೀಕ್ಷಿಸಬಾರದು. ಮಕ್ಕಳ ವಿವಿಧ ಅಗತ್ಯಗಳನ್ನು ಗಣನೆಗೆ ತೆಗೆದುಕೊಂಡು, ಅವರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಕೊಡುಗೆ ನೀಡಲು ಶಾಲೆಗಳು ಕ್ರಮಗಳನ್ನು ತೆಗೆದುಕೊಳ್ಳಬೇಕು. ಮಕ್ಕಳ ಆರೋಗ್ಯ ಮತ್ತು

ಸುರಕ್ಷತೆಗೆ ಇರುವ ಅಡೆತಡೆಗಳನ್ನು ತೆಗೆದುಹಾಕುವಂತಹ ಕ್ರಮಗಳನ್ನು ಕೈಗೊಳ್ಳಬೇಕು. ಉದಾಹರಣೆಗೆ, ಶಾಲೆ ಇರುವ ಸ್ಥಳ, ಶಾಲೆಗೆ ಹೋಗಿ ಬರುವ ರಸ್ತೆ, ತರಗತಿಯಲ್ಲಿ ಅಥವಾ ಆಟದ ಮೈದಾನಗಳಲ್ಲಿ ಮಕ್ಕಳಿಗೆ ಅನಾರೋಗ್ಯ ಅಥವಾ ಅಪಘಾತಗಳನ್ನು ಉಂಟುಮಾಡಬಲ್ಲಂತಹ ಅಂಶಗಳು ಮತ್ತು ಹುಡುಗಿಯರಿಗೆ ಸೂಕ್ತವಾದ ಸೌಲಭ್ಯಗಳನ್ನು ಒದಗಿಸುವುದು. ಇದು ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಲು ಅಗತ್ಯವಿರುವ ಸೌಲಭ್ಯಗಳು, ಸೇವೆಗಳು ಮತ್ತು ನೀತಿಗಳನ್ನು ಪೂರ್ವಭಾವಿಯಾಗಿ ಒದಗಿಸುವ ಅಗತ್ಯ ಮತ್ತು ಸ್ಥಳೀಯ ಸಮುದಾಯದ ಸಕ್ರಿಯ ಭಾಗವಹಿಸುವಿಕೆಯನ್ನು ಒಳಗೊಂಡಿದೆ. ಒಂದು ಆರೋಗ್ಯಕರ ವಾತಾವರಣವು ಮಕ್ಕಳಿಗೆ ಆಟ ಮತ್ತು ಮನರಂಜನೆಗಾಗಿ ಸುರಕ್ಷಿತ ಮತ್ತು ಪ್ರೋತ್ಸಾಹದಾಯಕ ಅವಕಾಶಗಳನ್ನು ಒದಗಿಸುವ ಅಗತ್ಯವನ್ನು ಕೂಡ ಹೊಂದಿದೆ.

**ಕಲಿಕಾ ವಾತಾವರಣದಲ್ಲಿ ಗೌರವಯುತವಾಗಿ ನಡೆಸಿಕೊಳ್ಳಲ್ಪಡುವ ಹಕ್ಕು**

ಮಾನವ ಹಕ್ಕುಗಳನ್ನು ಕಸಿದುಕೊಳ್ಳಲಾಗದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವು ಪ್ರತಿಯೊಬ್ಬ ಮನುಷ್ಯನಲ್ಲೂ ಅಂತರ್ಗತವಾಗಿವೆ. ಹಾಗಾಗಿ ಅವುಗಳನ್ನು ಎಲ್ಲ ಕಲಿಕಾ ಪರಿಸರದಲ್ಲಿಯೂ ಗೌರವಿಸಬೇಕು. ಹಾಗಾಗಿ, ಶಿಕ್ಷಣದ ಹಕ್ಕು ಎಂದರೆ ಮಕ್ಕಳ ಅಸ್ಮಿತೆಯ ಬಗ್ಗೆ ಗೌರವ, ಮಕ್ಕಳು ತಮಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕು ಮತ್ತು ಅವರ ದೈಹಿಕ ಮತ್ತು ವೈಯಕ್ತಿಕ ಸಮಗ್ರತೆಯನ್ನು (physical and personal integrity) ಒಳಗೊಂಡಿದೆ ಎಂದು ಅರ್ಥೈಸಿಕೊಳ್ಳಬೇಕು.

**ಅಸ್ಮಿತೆಗೆ ಗೌರವ**

1960ರಲ್ಲಿ ನಡೆದ UNESCOದ ಶಿಕ್ಷಣದಲ್ಲಿ ತಾರತಮ್ಯದ ವಿರುದ್ಧ ಸಮಾವೇಶ(UNESCO's Convention against Discrimination in Education)ವು ರಾಷ್ಟ್ರೀಯ ಅಲ್ಪಸಂಖ್ಯಾತರ ಶೈಕ್ಷಣಿಕ ಹಕ್ಕುಗಳನ್ನು ರಕ್ಷಿಸುತ್ತದೆ. ಪ್ರತಿ ರಾಷ್ಟ್ರದ ಶೈಕ್ಷಣಿಕ ನೀತಿಯನ್ನು ಅವಲಂಬಿಸಿ, ಒಟ್ಟಾರೆಯಾಗಿ ನಾಡಿನ/ವಿಶಾಲ ಸಮುದಾಯದ ಭಾಷೆ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದರಿಂದ ಅಲ್ಪಸಂಖ್ಯಾತರನ್ನು ಹೊರಗಿಡದೆ ಮತ್ತು ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಬಹುಸಂಖ್ಯಾತರು ಬಳಸುವ ಭಾಷೆಯಲ್ಲಿ ಕೊಡುವ ಶಿಕ್ಷಣದ ಗುಣಮಟ್ಟಕ್ಕಿಂತ ಕಳಪೆ ಮಟ್ಟದಲ್ಲಿ ಒದಗಿಸಲಾಗುತ್ತಿಲ್ಲ ಎಂಬ ಭದ್ರತೆಯೊಂದಿಗೆ ಇದು ಮಾತೃಭಾಷೆಯನ್ನು ಬಳಸುವ ಮತ್ತು ಅದರಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ಸ್ಥಾಪಿಸುತ್ತದೆ. 2005ರಲ್ಲಿ ನಡೆದ ಸಾಂಸ್ಕೃತಿಕ ಅಭಿವ್ಯಕ್ತಿಗಳಲ್ಲಿ ವೈವಿಧ್ಯದ ರಕ್ಷಣೆ ಮತ್ತು ಪ್ರಚಾರದ ಸಮಾವೇಶ Convention on the Protection and Promotion of Diversity in Cultural Expressions)ವು ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಸಾಂಸ್ಕೃತಿಕ ವೈವಿಧ್ಯವನ್ನು ಗೌರವಿಸುವ ಬಾಧ್ಯತೆಗಳನ್ನು ಪರಿಚಯಿಸುತ್ತದೆ.

ಇದರ ಜೊತೆಗೆ, ಮಕ್ಕಳ ಹಕ್ಕುಗಳ ಸಮಾವೇಶ(Convention on the Rights of the Child)ದ 30ನೇ ವಿಧಿಯು ಮಕ್ಕಳು ತಮ್ಮ ಸಂಸ್ಕೃತಿಯನ್ನು ಆನಂದಿಸಲು, ತಮ್ಮದೇ ಆದ ಧರ್ಮವನ್ನು ಪಾಲಿಸಲು ಮತ್ತು ಅವರ ಸ್ವಂತ ಭಾಷೆಯನ್ನು ಬಳಸುವ ಹಕ್ಕನ್ನು ಒತ್ತಿಹೇಳುತ್ತದೆ. ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನು, ತಮ್ಮ ಮಗುವಿಗೆ ಯಾವ ರೀತಿಯ ಶಿಕ್ಷಣವನ್ನು ಕೊಡಬೇಕು ಎಂದು ನಿರ್ಧರಿಸುವ ಪೋಷಕರ ಸ್ವಾತಂತ್ರ್ಯವನ್ನು ಸರಕಾರಗಳು ಗೌರವಿಸಬೇಕು ಎಂದು ಸಾರುತ್ತದೆ. ಆದರೆ ಶಾಲೆಗಳಲ್ಲಿ ಯಾವುದಾದರೂ ಧರ್ಮವನ್ನು ಬೋಧಿಸಬೇಕೆಂದಿದ್ದರೆ ಅದು ಯಾವುದಾಗಿರಬೇಕು ಮತ್ತು ಶಾಲೆಗಳಲ್ಲಿ ಯಾವ ಬೋಧನಾ ಮಾಧ್ಯಮವನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯ ಸರ್ಕಾರಗಳಿಗೆ ಇದೆ. ಅಂತಿಮವಾಗಿ, ಮಕ್ಕಳ ಹಕ್ಕುಗಳ ಸಮಾವೇಶ (Convention on the Rights of the Child)ವು ಮಕ್ಕಳು ತಮಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ಅವುಗಳಿಗೆ ಸೂಕ್ತ ಮನ್ನಣೆ ಪಡೆಯುವ ಹಕ್ಕನ್ನು ಗುರುತಿಸುವಲ್ಲಿ, ಶೈಕ್ಷಣಿಕ ಆಯ್ಕೆ ಮತ್ತು ಸ್ವಾತಂತ್ರ್ಯಕ್ಕೆ ಇನ್ನೊಂದು ಮುಂದುವರಿದ ಆಯಾಮವನ್ನು ಪರಿಚಯಿಸುತ್ತದೆ. ಹೀಗಾಗಿ, ಶಿಕ್ಷಣದ ವಿಷಯದಲ್ಲಿ ಮಕ್ಕಳು, ಪೋಷಕರು ಮತ್ತು ಸರ್ಕಾರಗಳ ನಡುವೆ ಅಧ್ಯಾಯ 1 ರಲ್ಲಿ ಚರ್ಚಿಸಲಾದ ಉದ್ವಿಗ್ನತೆಗಳು ಹೆಚ್ಚಾಗಿ ಈ ಸಾಂಸ್ಕೃತಿಕ ಹಕ್ಕುಗಳ ಕಣದಲ್ಲಿ ಬರುತ್ತವೆ.

ಈ ಉದ್ವಿಗ್ನತೆಗಳಿಗೆ ಯಾವುದೇ ಒಂದು ಸರಳ ಪರಿಹಾರವಾಗಲಿ ಅಥವಾ ಯಾವುದೇ ಒಂದು ಸರಿಯಾದ ವಿಧಾನ ಎಂಬುದಾಗಲಿ ಇಲ್ಲ. ಯಾವುದೇ ವಿಧಾನವನ್ನು ಅಳವಡಿಸಿಕೊಂಡರೂ, ಮಕ್ಕಳು ಒಂದು ಅಲ್ಪಸಂಖ್ಯಾತ ಭಾಷೆ ಮಾತಾಡುತ್ತಿದ್ದಾರೆ ಎಂಬ ಕಾರಣಕ್ಕೆ ತಾರತಮ್ಯಕ್ಕೆ ಒಳಗಾಗದಂತೆ, ಅವರ ಸಂಸ್ಕೃತಿ ಮತ್ತು ಧರ್ಮಕ್ಕೆ ಗೌರವ ಸಿಗುವಂತೆ

## ಮಕ್ಕಳ ಕಲಿಕಾ ವಾತಾವರಣದಲ್ಲಿ ಅವರ ಹಕ್ಕುಗಳನ್ನು ಗೌರವಿಸಬೇಕಾದ ಬಾಧ್ಯತೆ

- ಯಾವುದೇ ಆಧಾರದ ಮೇಲೆ ತಾರತಮ್ಯವಿಲ್ಲದೆ ಪ್ರತಿ ಮಗುವನ್ನು ಸಮಾನವಾಗಿ ಗೌರವಿಸುವುದು.
- ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳ ಬಗ್ಗೆ, ಸಮಾಜದಲ್ಲಿ ಇರುವ ಭಿನ್ನತೆಗಳ ಬಗ್ಗೆ, ಮತ್ತು ತಿಳಿವಳಿಕೆ, ಶಾಂತಿ, ಸಹಿಷ್ಣುತೆ, ಸಮಾನತೆ ಮತ್ತು ಸ್ನೇಹವಿರುವ ಸಮಾಜದ ಬಗ್ಗೆ ಗೌರವ ಭಾವನೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಸುವುದು.
- ಮಗುವಿನ ಹಿತಾಸಕ್ತಿಗಳಿಗೆ ಅತ್ಯುನ್ನತ ಪ್ರಮಾಣದಲ್ಲಿ ಪ್ರಾಮುಖ್ಯವನ್ನು ಕೊಡುವುದು.
- ವಿಕಸನಗೊಳ್ಳುತ್ತಿರುವ ಮಗುವಿನ ಸಾಮರ್ಥ್ಯದ ಬಗ್ಗೆ ಗೌರವ ತೋರಿಸುವುದು.
- ಮಕ್ಕಳಿಗೆ ತಮಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಗೌರವಿಸುವುದು ಮತ್ತು ಮಕ್ಕಳ ವಯಸ್ಸು ಮತ್ತು ಪ್ರಬುದ್ಧತೆಗೆ ಅನುಗುಣವಾಗಿ ಅವರ ಅಭಿಪ್ರಾಯಗಳಿಗೆ ಸರಿಯಾದ ಮನ್ನಣೆಯನ್ನು ನೀಡುವುದು.
- ಮಕ್ಕಳ ಅಭಿವ್ಯಕ್ತಿ, ಧರ್ಮ, ಆತ್ಮಸಾಕ್ಷಿ, ಚಿಂತನೆ ಮತ್ತು ಸಭೆಗೂಡುವ ಸ್ವಾತಂತ್ರ್ಯದ ಹಕ್ಕನ್ನು ಮಾನ್ಯ ಮಾಡುವುದು.
- ಮಕ್ಕಳ ಖಾಸಗಿತನವನ್ನು ಗೌರವಿಸುವುದು.
- ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ ಅಂಗೀಕೃತವಾದ ಮಗುವಿನ ಘನತೆ ಮತ್ತು ಇನ್ನಿತರ ಹಕ್ಕುಗಳಿಗೆ ಅನುಗುಣವಾಗಿ ಶಾಲಾ ಶಿಸ್ತಿನ ಕ್ರಮಗಳನ್ನು ನಿರ್ವಹಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಎಲ್ಲ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.
- ಲೈಂಗಿಕ ದೌರ್ಜನ್ಯ ಸೇರಿದಂತೆ ಎಲ್ಲ ರೀತಿಯ ದೈಹಿಕ ಹಿಂಸೆ, ಗಾಯ ಅಥವಾ ನಿಂದನೆ, ನಿರ್ಲಕ್ಷ್ಯ, ದುರುಪಯೋಗ ಅಥವಾ ಶೋಷಣೆಯಿಂದ ಮಕ್ಕಳನ್ನು ರಕ್ಷಿಸುವುದು.

ಮೂಲ: Articles 2, 3, 5, 12, 13, 14, 15, 16, 19, 28, 29, Convention on the Rights of the Child; articles 1, 2, Universal Declaration of Human Rights; articles 18, 19, 27, International Covenant of Civil and Political Rights.

ನೋಡಿಕೊಳ್ಳುವ ಮತ್ತು ಅಲ್ಪಸಂಖ್ಯಾತರ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ ಎಂಬ ಕಾರಣಕ್ಕೆ ಸಾಮಾಜಿಕ ಬಹಿಷ್ಕಾರ ಮತ್ತು ಶೈಕ್ಷಣಿಕ ಅನನುಕೂಲತೆಯನ್ನು ತಡೆಗಟ್ಟುವ ಎಲ್ಲ ಪ್ರಯತ್ನಗಳನ್ನು ಮಾಡುವ ಬಾಧ್ಯತೆ ಸರ್ಕಾರಗಳದ್ದಾಗಿದೆ. ಅಸ್ಮಿತೆಯನ್ನು ಗೌರವಿಸಲು ಇರಬೇಕಾದ ಅತ್ಯಂತ ಸೂಕ್ತವಾದ ವ್ಯವಸ್ಥೆಯನ್ನು ನಿರ್ಧರಿಸುವಲ್ಲಿ, ಹಕ್ಕು-ಆಧಾರಿತ ವಿಧಾನವು ಮಕ್ಕಳು, ಕುಟುಂಬಗಳು ಮತ್ತು ಸಮುದಾಯಗಳನ್ನು ಸಮಾಲೋಚಿಸಿ ಮತ್ತು ತೊಡಗಿಸಿಕೊಳ್ಳುವ ಅಗತ್ಯವನ್ನು ಸಾರುತ್ತದೆ. ಮತ್ತು ಸಂಬಂಧಿತ ನೀತಿ ನಿಯಮಗಳನ್ನು ಪಾಲಿಸದೆ ಹೋದರೆ, ಅದನ್ನು ಉಲ್ಲಂಘಿಸಿದ ಶಾಲೆಗಳು, ಶಿಕ್ಷಣ ಅಧಿಕಾರಿಗಳು ಮತ್ತು ಸರ್ಕಾರವನ್ನು ಪ್ರಶ್ನಿಸಲು ಅಗತ್ಯವಾದ ಸಾಂಸ್ಥಿಕ ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು ಚಾಲ್ತಿಯಲ್ಲಿಟ್ಟಿರಬೇಕು.

**ಭಾಗವಹಿಸುವಿಕೆಯ ಹಕ್ಕುಗಳ ಬಗ್ಗೆ ಗೌರವ**

ಮಕ್ಕಳ ಹಕ್ಕುಗಳ ಸಮಾವೇಶದ 12ನೇ ವಿಧಿಯು ಮಕ್ಕಳು ತಮಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಅವರ ವಯಸ್ಸು ಮತ್ತು ಪ್ರಬುದ್ಧತೆಗೆ ಅನುಗುಣವಾಗಿ ತಮ್ಮ ಅಭಿಪ್ರಾಯಗಳಿಗೆ ಸೂಕ್ತ ಮನ್ನಣೆಯನ್ನು ಪಡೆಯಲು ಅರ್ಹರಾಗಿದ್ದಾರೆ ಎಂಬುದನ್ನು ಸ್ಥಾಪಿಸುತ್ತದೆ. ಈ ಭಾಗವಹಿಸುವಿಕೆಯ ತತ್ತ್ವವನ್ನು, ಅಭಿವ್ಯಕ್ತಿ ಸ್ವಾತಂತ್ರ್ಯ, ಧರ್ಮ ಮತ್ತು ಸಂಘಟನೆಗಳನ್ನು ಮಾಡುವ ಇತರ ಹಕ್ಕುಗಳು ದೃಢೀಕರಿಸುತ್ತವೆ. ಈ ಹಕ್ಕುಗಳು ಅವರ ಶಿಕ್ಷಣದ ಎಲ್ಲ ಅಂಶಗಳಿಗೆ ಅನ್ವಯಿಸುತ್ತವೆ ಮತ್ತು ಶಿಕ್ಷಣ ವ್ಯವಸ್ಥೆಯಾದ್ಯಂತ ಮಕ್ಕಳ ಸ್ಥಿತಿಗತಿಯ ಮೇಲೆ ಆಳವಾದ ಪರಿಣಾಮಗಳನ್ನು ಹೊಂದಿವೆ. ಭಾಗವಹಿಸುವಿಕೆಯ ಹಕ್ಕುಗಳು ತರಗತಿಯಲ್ಲಿನ ಶೈಕ್ಷಣಿಕ ಸಂಬಂಧಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ, ಬದಲಿಗೆ ಇದು ಶಾಲೆಯಾದ್ಯಂತ ಮತ್ತು ಶಾಸನ ಮತ್ತು ನೀತಿಯ ಅಭಿವೃದ್ಧಿಗೂ ವಿಸ್ತರಿಸುತ್ತದೆ. ಮಕ್ಕಳ ಹಕ್ಕುಗಳ ಸಮಿತಿಯು ಶಾಲೆಗಳಲ್ಲಿ ಮಕ್ಕಳ ಹೆಚ್ಚಿನ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಸರ್ಕಾರಗಳು ಕ್ರಮಗಳನ್ನು ತೆಗೆದುಕೊಳ್ಳುವಂತೆ ಆಗಾಗ್ಗೆ ಶಿಫಾರಸು ಮಾಡಿದೆ. [38] ಮಕ್ಕಳು ತಮ್ಮ ಹಕ್ಕುಗಳ ಸಾಕ್ಷಾತ್ಕಾರಕ್ಕಾಗಿ ತಾವೇ ಪ್ರತಿಪಾದನೆಯ ಪ್ರಮುಖ ಪಾತ್ರವನ್ನು ವಹಿಸಬಹುದು. ಶಿಕ್ಷಣ ವ್ಯವಸ್ಥೆಯ ಎಲ್ಲ ಹಂತಗಳಲ್ಲಿ ಈ ಹಕ್ಕುಗಳನ್ನು ಸ್ಥಾಪಿಸಲು ಮತ್ತು ಬೆಂಬಲಿಸಲು ಸರ್ಕಾರಗಳು ಕಾನೂನು ಮತ್ತು ನೀತಿಯನ್ನು ಪರಿಚಯಿಸಬೇಕಾಗಿದೆ (ಅನುಬಂಧ VI, ಪುಟ 131 ನೋಡಿ).

**ವ್ಯಕ್ತಿತ್ವದ ಸಮಗ್ರತೆ(integrity)ಯ ಬಗ್ಗೆ ಗೌರವ**

ಸಮಾವೇಶದ ಒಡಂಬಡಿಕೆಗಳು, ಮಕ್ಕಳನ್ನು ಎಲ್ಲ ರೀತಿಯ ಹಿಂಸೆಯಿಂದ ರಕ್ಷಿಸುವುದು ಮಾತ್ರವಲ್ಲದೆ, ಶಾಲಾ ಶಿಸ್ತಿನ ಕ್ರಮಗಳನ್ನು ಕೈಗೊಳ್ಳುವಾಗ ಅವುಗಳು ಮಗುವಿನ ಘನತೆಗೆ ಧಕ್ಕೆಯಾಗದಂತೆ ಕೈಗೊಳ್ಳಬೇಕಾದ ಬಾಧ್ಯತೆಯನ್ನು ಎತ್ತಿಹಿಡಿಯುತ್ತವೆ. ಆದಾಗ್ಯೂ, ಶಾಲೆಯಲ್ಲಿ ಮಕ್ಕಳು ಮಾನಸಿಕ ಹಿಂಸೆ ಮತ್ತು ಅವಮಾನ ಸೇರಿದಂತೆ, ನಿಯಮಿತವಾಗಿ ತೀವ್ರವಾದ ಹಿಂಸೆಗೆ ಬಲಿಯಾಗುವುದು ಪ್ರಪಂಚದಾದ್ಯಂತ ವ್ಯಾಪಕವಾಗಿ ನಡೆಯುತ್ತಿದೆ.[39] ಮಕ್ಕಳ ಹಕ್ಕುಗಳ ಸಮಿತಿಯು ಇಂತಹ ಶಿಕ್ಷೆಗಳು ಮಗುವಿನ ಹಕ್ಕುಗಳ ಉಲ್ಲಂಘನೆಯಾಗಿದ್ದು, ಅವುಗಳು ಮಗುವಿನ ಘನತೆಗೆ ಧಕ್ಕೆ ತರುತ್ತವೆ ಎಂಬುದನ್ನು ಬಲವಾಗಿ ಹೇಳುತ್ತದೆ. ಇದರ ಜೊತೆಗೆ ಮಕ್ಕಳ ವಿರುದ್ಧ ಮಕ್ಕಳಿಂದ ಮತ್ತು ಶಿಕ್ಷಕರ ವಿರುದ್ಧ ಮಕ್ಕಳಿಂದ ಹೆಚ್ಚಿನ ಹಿಂಸಾಚಾರವೂ ನಡೆಯುತ್ತದೆ ಮತ್ತು ಅಂತಹ ನಡವಳಿಕೆಯನ್ನು ನಾವು ತಿದ್ದುವುದು ಕೂಡ ಅಷ್ಟೇ ಮುಖ್ಯ.

ದೈಹಿಕ ಮತ್ತು ಇತರ ರೀತಿಯ ಅವಮಾನಕರ ಮತ್ತು ನಿಂದನೀಯ ವರ್ತನೆಯು ಹಿಂಸಾಚಾರದಿಂದ ಮಗುವಿಗೆ ಇರುವ ರಕ್ಷಣೆಯ ಹಕ್ಕನ್ನು ಉಲ್ಲಂಘಿಸುವುದಲ್ಲದೆ, ಇದು ಕಲಿಕೆಗೆ ಕೂಡ ಸಾಕಷ್ಟು ಪ್ರತಿಕೂಲವಾಗಿದೆ. ಮಕ್ಕಳು ತಾವು ಶಾಲೆಯಿಂದ ಹೊರಗುಳಿಯಲು ಇರುವ ಮುಖ್ಯ ಕಾರಣ ಅಲ್ಲಿ ಅನುಭವಿಸುವ ಹಿಂಸೆ ಎಂದು ಹೇಳುತ್ತಾರೆ.[40] ಇದಲ್ಲದೆ, ಇದು ಸ್ವಾಭಿಮಾನವನ್ನು ಕುಗ್ಗಿಸುತ್ತದೆ ಮತ್ತು ಹಿಂಸೆ ಸ್ವೀಕಾರಾರ್ಹ ಎಂಬ ಸಂದೇಶವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುತ್ತದೆ. ಶಾಲೆಗಳಲ್ಲಿ ಮಕ್ಕಳ ಮೇಲಿನ ಹಿಂಸೆಯ ನಿರಂತರ ಬಳಕೆಗೆ ಹಲವು ಅಂಶಗಳು ಕಾರಣವಾಗುತ್ತವೆ. ಅವುಗಳೆಂದರೆ:

- ಮಕ್ಕಳ ಮೇಲಿನ ದೌರ್ಜನ್ಯವನ್ನು ಸಾಮಾಜಿಕವಾಗಿ ಮತ್ತು ಕಾನೂನಾತ್ಮಕವಾಗಿ ಪ್ರಶ್ನಿಸದೆ ಹೋಗುವುದು.
- ಸಾಕಷ್ಟು ತರಬೇತಿಯ ಕೊರತೆಯಿಂದಾಗಿ ಶಿಕ್ಷಕರ ತರಗತಿ ನಿರ್ವಹಣೆ ಕಳಪೆಯಾಗಿದ್ದು, ಇದು ಅಶಿಸ್ತಿಗೆ ಕಾರಣವಾಗುವುದು.
- ಧನಾತ್ಮಕ ಶಿಸ್ತಿಗೆ ಸಂಬಂಧಿಸಿದ ಪ್ರಯೋಜನಗಳ ಬಗ್ಗೆ, ಧನಾತ್ಮಕ ಶಿಸ್ತನ್ನು ಬೆಳೆಸಬೇಕಾದ ವಿಧಾನಗಳ ಬಗ್ಗೆ ಅರಿವು ಇಲ್ಲದಿರುವುದು.
- ದೈಹಿಕ ಶಿಕ್ಷೆಯ ಹಾನಿಕಾರಕ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ವಿಫಲವಾಗುವುದು.
- ಮಕ್ಕಳು ಕಲಿಯುವ ವಿಭಿನ್ನ ವಿಧಾನಗಳ ತಿಳಿವಳಿಕೆಯ ಕೊರತೆ ಮತ್ತು ಮಕ್ಕಳು ತಮ್ಮ ಬೆಳವಣಿಗೆಯಲ್ಲಿ ಮತ್ತು ಅರ್ಥಮಾಡಿಕೊಳ್ಳುವ ಸಾಮರ್ಥ್ಯದಲ್ಲಿ ಭಿನ್ನವಾಗಿರುತ್ತಾರೆ ಎಂಬ ತಿಳಿವಳಿಕೆಯ ಕೊರತೆ.

ಈ ಎಲ್ಲ ಅಡೆತಡೆಗಳನ್ನು ಪರಿಹರಿಸಲು ಮತ್ತು ಎಲ್ಲ ರೀತಿಯ ದೈಹಿಕ ಮತ್ತು ಅವಮಾನಕರ ಶಿಕ್ಷೆಗಳನ್ನು ನಿಷೇಧಿಸುವ ಮತ್ತು ಅಹಿಂಸಾತ್ಮಕ ಸಂಘರ್ಷ ಪರಿಹಾರಕ್ಕೆ ಬದ್ಧತೆಯನ್ನು ಬೆಳೆಸುವ, ಹಕ್ಕುಗಳನ್ನು ಗೌರವಿಸುವ ಶೈಕ್ಷಣಿಕ ವಾತಾವರಣವನ್ನು ಅಭಿ